“ಗಿರವಿ ಇಟ್ಟುಕೊಳ್ಳುವವರು ಹಾಗೆಯೇ. ಗಿರವಿ ಇಡುವ ವಸ್ತುವಿನ ನೈಜ ಬೆಲೆಯ ಮೇಲೆ ಶೇಕಡ ಹತ್ತಕ್ಕಿಂತ ಮೇಲೆ ಕೊಡುವುದೇ ಇಲ್ಲ!”

“ದೇವರೇ! ಇದೆಲ್ಲಾ ನನಗೆ ಗೊತ್ತೇ ಇರಲಿಲ್ಲ.”

“ನಿಮಗೆ, ಹೆಣ್ಣುಮಕ್ಕಳಿಗೆ ಬಹಳಷ್ಟು ಸಂಗತಿಗಳು ಗೊತ್ತಿಲ್ಲ ಡಾರ್ಲಿಂಗ್! ಅದಕ್ಕೇ ಹೇಳುವುದು, ಕೊಂಚವಾದರೂ ವ್ಯವಹಾರ ಜ್ಞಾನ ಬೆಳೆಸಿಕೊಳ್ಳಿ ಎಂದು. ಈಗ ನಾನು ಹೇಳುವುದು ಕೇಳು. ಈ ರಸೀದಿಯ ಮೇಲೆ ಗಿರವಿ ಇಟ್ಟವನ ಹೆಸರಾಗಲೀ ವಿಳಾಸವಾಗಲಿ ಇಲ್ಲ...”

“ಗಿರವಿ ಅಂಗಡಿಯವನ ಬಳಿ ಅಂತೂ ಇರುತ್ತದೆಯಲ್ಲವೇ?”

“ಇಲ್ಲ! ಬಹಳಷ್ಟು ಜನರಿಗೆ ತಾವು ಗಿರವಿ ಇಡಲು ಹೋಗಿದ್ದೆವೆಂಬುದೇ ಲಜ್ಜಾಸ್ಪದ ವಿಚಾರವಾಗಿರುತ್ತದೆ. ಆದ್ದರಿಂದ ಇಂತಹ ಹೆಸರು ವಿಳಾಸವಿಲ್ಲದ ರಸೀದಿಗಳು ಸೃಷ್ಟಿಯಾಗುತ್ತವೆ.”

“ಹಾಗಾದರೆ ನಾವು ಈ ರಸೀದಿಯನ್ನು ಬಳಸಬಹುದು?”

“ಖಂಡಿತ. ಈಗ ಇದು ನಮ್ಮದು.”

“ಅದು ‘ನನ್ನದು’ ಸಿರಿಲ್! ನನಗೆ ಸಿಕ್ಕಿದ್ದು!!”

“ಆಯ್ತು ಡಾರ್ಲಿಂಗ್, ನಿನ್ನದೇ!”

“ಓಹ್, ಸಿರಿಲ್! ಇದೊಂತರಾ ಮಜವಾಗಿದೆ. ಆ ವಸ್ತು ಏನೆಂದೇ ನಮಗೆ ಗೊತ್ತಿಲ್ಲ! ಅದು ಏನು ಬೇಕಾದರೂ ಆಗಬಹುದು, ಅಲ್ಲವೇ?”

“ಹೌದು. ಚಿನ್ನದ ಉಂಗುರ, ಅಥವಾ ವಾಚು...”

“ಅದಕ್ಕಿಂತಲೂ ಬೆಲೆ ಬಾಳುವ ಪ್ರಾಚೀನ ಹೂದಾನಿ, ಗ್ರೀಕ್ ಪುತ್ಥಳಿ...”

“ಏನು ಬೇಕಾದರೂ ಆಗಬಹುದು ಡಾರ್ಲಿಂಗ್.”

“ಹಾಗಾದರೆ ಆ ರಸೀದಿ ಇಲ್ಲಿ ಕೊಡು ಸಿರಿಲ್. ನೀನಂತೂ ತುಂಬಾ ಬಿಜೀ ಮನುಷ್ಯ. ಸೋಮವಾರ ನಾನೇ ಹೋಗಿ ಅದು ಏನಂತ ನೋಡಿ ತರುತ್ತೇನೆ.”

